**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 15/2020 ಅ.ಸಾ. 6**

**ಚಾ.ಸಾ.6**

| | | |
|---|---|---|
| ಸಾಕ್ಷಿದಾರರ ಹೆಸರು | - | ಸುಧಾಕರ ಪೂಜಾರಿ |
| ತಂದೆಯ ಹೆಸರು | - | ರಾಮ ಪೂಜಾರಿ |
| ವಯಸ್ಸು | - | 43 ವರ್ಷ |
| ಉದ್ಯೋಗ | - | ಹಾಲಿನ ವ್ಯಾಪಾರ |
| ವಿಳಾಸ | - | ಲಕ್ಷ್ಮೀನಗರ, ತೆಂಕನಿಡಿಯೂರು ಗ್ರಾಮ, ಉಡುಪಿ. |

ದಿನಾಂಕಃ 31-08-2023 ರಂದು ಸಾಕ್ಷಿಯನ್ನು ಕರೆಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ಮೃತ ಯೋಗೀಶನ ಪರಿಚಯ ಇದೆ. ಅವನ ಮನೆ ನಮ್ಮ ಮನೆಯ ಹತ್ತಿರ ಇದೆ. ಒಂದನೇ ಆರೋಪಿಯ ಪರಿಚಯ ಇದೆ. ಉಳಿದ ಆರೋಪಿತರ ಪರಿಚಯವೂ ಇದೆ. ಮೃತ ಯೋಗೀಶ ಮತ್ತು ಒಂದನೇ ಆರೋಪಿ ಸ್ನೇಹಿತರಾಗಿದ್ದರು. ಕೋವಿಡ್-19 ಲಾಕ್ ಡೌನ್ ಸಮಯದಲ್ಲಿ ಸುಮಾರು ಮೂರು ವರ್ಷಗಳ ಹಿಂದೆ ಒಂದನೇ ಆರೋಪಿಯು ಮದ್ಯ ಸೇವನೆ ಮಾಡಿರುವ ವಿಚಾರವನ್ನು ಯೋಗೀಶನು ಊರಿನಲ್ಲಿ ಹೇಳುತ್ತಿದ್ದಾನೆಂದು ಅವರೊಳಗೆ ಜಗಳವಾಗಿತ್ತು.

2. ದಿಃ 06-07-2020 ರಂದು ನಾನು ನನ್ನ ಮನೆಯಲ್ಲಿದ್ದಾಗ ರಾತ್ರಿ ಸುಮಾರು 11-30 ರ ಸಮಯದಲ್ಲಿ ಯೋಗೀಶನ ಮನೆಯಿಂದ ಬೊಬ್ಬೆ ಕೇಳಿದಾಗ ನಾನು ತಕ್ಷಣ ಅಲ್ಲಿಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಯೋಗೀಶನ ಬೈಕ್ ಆತನ ಮನೆಯ ಹತ್ತಿರ ರಸ್ತೆಯಲ್ಲಿ ಬಿದ್ದಿತ್ತು. ನಾನು ನೋಡುವಾಗ ನಾಲ್ಕನೇ ಆರೋಪಿ ಪ್ರದೀಪ್ ಯಾನೆ ಅಣ್ಣು ಯೋಗೀಶನನ್ನು ಹಿಡಿದುಕೊಂಡಿದ್ದನು. ಎರಡನೇ ಆರೋಪಿ ರೋಹಿತ್ ಹಾಗೂ ಮೂರನೇ ಆರೋಪಿ ಸುಜಿತ್ ಯೋಗೀಶನ ಹೊಟ್ಟೆಯ ಭಾಗಕ್ಕೆ ಚುಚ್ಚುತ್ತಿದ್ದರು, ಉಳಿದ ಆರೋಪಿತರು ಯೋಗೀಶನಿಗೆ

ಹೊಡೆಯುತ್ತಿದ್ದರು. ನಂತರ ಯೋಗೀಶನು ಅವರಿಂದ ತಪ್ಪಿಸಿಕೊಂಡು ಕಾಂಕ್ರೀಟ್ ರಸ್ತೆಯಲ್ಲಿ ಸ್ವಲ್ಪ ದೂರು ಬಂದಾಗ ಮೂರನೇ ಆರೋಪಿ ಸುಜಿತ್ ಪಿಂಟೋನ ಕೈಯಲ್ಲಿದ್ದ ಚಾಕುವನ್ನು ಒಂದನೇ ಆರೋಪಿ ವಿನಯ್ ದೇವಾಡಿಗನು ತೆಗೆದುಕೊಂಡು ಯೋಗೀಶನ ಬೆನ್ನಿಗೆ ಚುಚ್ಚಿರುತ್ತಾನೆ. ನಾವು ಬೊಬ್ಬೆ ಹೊಡೆದಾಗ ಆರೋಪಿತರು ಘಟನಾ ಸ್ಥಳದಿಂದ ಓಡಿ ಹೋಗಿರುತ್ತಾರೆ.

3. ನಂತರ ಅಸಾ1 ಮತ್ತು 8 ರವರು ಯೋಗೀಶನನ್ನು ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಆ್ಯಂಬ್ಯುಲೆನ್ಸ್ ನಲ್ಲಿ ತೆಗೆದುಕೊಂಡು ಹೋಗಿರುತ್ತಾರೆ. ದಾರಿ ಮಧ್ಯೆದಲ್ಲೇ ಯೋಗೀಶನು ಮೃತ ಪಟ್ಟಿರುತ್ತಾನೆಂದು ಗೊತ್ತಾಯಿತು. ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ.

4. ದಿಃ 07-07-2020 ರಂದು ಪೋಲಿಸರು ಬೆಳಗ್ಗಿನ ಜಾವ 4-00 ಗಂಟೆ ಸಮಯಕ್ಕೆ ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಘಟನೆ ನಡೆದ ಸ್ಥಳವನ್ನು ಪೋಲಿಸರಿಗೆ ಚಾಸಾ1 ರವರು ತೋರಿಸಿರುತ್ತಾರೆ. ಘಟನಾ ಸ್ಥಳದಲ್ಲಿ ಬಿದ್ದಿದ್ದ ಯೋಗೀಶನ ಬೈಕ್, ಆತನ ಚಪ್ಪಲಿಯನ್ನು ಪೋಲಿಸರು ನಮ್ಮ ಸಮಕ್ಷಮ ಪರಿಶೀಲಿಸಿರುತ್ತಾರೆ. ಘಟನಾ ಸ್ಥಳದಲ್ಲಿದ್ದ ಬಿದ್ದಿದ್ದ ರಕ್ತವನ್ನು ಹತ್ತಿಯ ಮೂಲಕ ತೆಗೆದು ಸಂಗ್ರಹಿಸಿ ಡಬ್ಬದಲ್ಲಿ ಹಾಕಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿರುತ್ತಾರೆ. ರಕ್ತ ಶೇಖರಣೆಗೆ ಉಪಯೋಗಿಸಿದ ಹತ್ತಿಯನ್ನು ಕೂಡ ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಅದೇ ಸಮಯ ಪೋಲಿಸರು ಮಹಜರು ತಯಾರಿಸಿರುತ್ತಾರೆ. ಸದ್ರಿ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ನನ್ನೊಂದಿಗೆ ಚಾಸಾ10 ಅನಿಶ್ ಪೂಜಾರಿಯವರು ಸಹಾ ನಿಪಿ-2 ಕ್ಕೆ ಸಹಿ ಮಾಡಿರುತ್ತಾರೆ. ಸ್ಥಳ ತನಿಖಾ ಕಾಲದಲ್ಲಿ ಪೋಲಿಸರು ವಶಪಡಿಸಿಕೊಂಡಿದ್ದ ಎರಡು ಸೊತ್ತುಗಳ ಮೇಲೆ ಚೀಟಿ ಅಂಟಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ರಕ್ತ ಅದ್ದಿ ತೆಗೆದ ಹತ್ತಿ ಹಾಗೂ ಮಾದರಿ ಹತ್ತಿಗಳನ್ನು ಈಗಾಗಲೇ ಮುದ್ದೆಮಾಲು-1 ಮತ್ತು 2 ಎಂದು ಗುರುತಿಸಲಾಗಿದೆ. ಮೃತನ ಬೈಕ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸದ್ರಿ ಬೈಕ್ ನ ಪೋಟೋವನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಅದೇ ಸಮಯ ಕಚ್ಚಾ ನಕಾಶೆಯನ್ನು ತಯಾರಿಸಿದ್ದು ನಿಪಿ-27 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಯನ್ನು ನ್ಯಾಯಾಲಯದ ಮಧ್ಯಾಹ್ನದ ಕಲಾಪಕ್ಕೆ ಮುಂದೂಡಲಾಯಿತು.**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪ್ರಕರಣವನ್ನು ಕೂಗಿಸಲಾಯಿತು. ಮುಂದುವರಿದ ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದಃ**

5. ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಪ್ಯಾಕ್ ಮಾಡಿ ಸೀಲು ಮಾಡಲಾದ ಮುದ್ದೆಮಾಲುಗಳನ್ನು ನೋಡುತ್ತಿದ್ದು ಅದು steel ಹಾಗೂ ಮರದ ಹಿಡಿ ಹೊಂದಿರುವ ಬಟನ್ ಸಿಸ್ಟಮ್ ಚೂರಿಯಾಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಮುದ್ದೆಮಾಲು-3 ಎಂದು ಗುರುತಿಸಲಾಯಿತು. ದಿಃ 08-07-2020 ರಂದು ನಾನು ಪೋಲಿಸ್ ಠಾಣೆಗೆ ಹೋಗಿದ್ದು, ಅಲ್ಲಿ ಈ ಪ್ರಕರಣದ 1 ರಿಂದ 4 ನೇ ಆರೋಪಿತರು ಇದ್ದು ಅವರನ್ನು ನೋಡಿ ಗುರುತಿಸಿರುತ್ತೇನೆ. ದಿಃ 12-07-2020 ರಂದು ನಾನು ಪೋಲಿಸ್ ಠಾಣೆಗೆ ಹೋಗಿದ್ದು ಅಂದು ಈ ಪ್ರಕರಣದ ಐದನೇ ಆರೋಪಿ ಅನುಪ್ ನನ್ನು ನೋಡಿ ಗುರುತಿಸಿರುತ್ತೇನೆ. ದಿಃ 28-08-2020 ರಂದು ನಾನು ಮತ್ತೆ ಪೋಲಿಸ್ ಠಾಣೆಗೆ ಹೋದಾಗ ಈ ಪ್ರಕರಣದ ಆರನೇ ಆರೋಪಿ ಗಿರೀಶ್ ನನ್ನು ನೋಡಿರುತ್ತೇನೆ. ಆರನೇ ಆರೋಪಿಯ ವಶದಿಂದ ಒಂದು ಮೊಬೈಲ್ ಫೋನ್, ಪಾಸ್ ಪೋರ್ಟ್ ಮತ್ತು ಮೋಟಾರ್ ಸೈಕಲ್ ಅನ್ನು ಅಮಾನತ್ತುಪಡಿಸಿಕೊಂಡು ಈ ಬಗ್ಗೆ ಮಹಜರು ತಯಾರಿಸಿದ್ದು ಆ ಮಹಜರನ್ನು ನಿಪಿ-28 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ28(ಎ) ಎಂದು ಗುರುತಿಸಲಾಯಿತು. ನಿಪಿ22 ರಲ್ಲಿ ಪಂಚರಾಗಿ ಚಾಸಾ12 ರವರು ಸಹಾ ನನ್ನೊಂದಿಗೆ ಇದ್ದು ಪಂಚರಾಗಿ ಸಹಿ ಮಾಡಿರುತ್ತಾರೆ. ಆರನೇ ಆರೋಪಿಯ ವಶದಿಂದ ಅಮಾನತ್ತು ಪಡಿಸಿಕೊಂಡ ಮೊಬೈಲ್ ಫೋನನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ ಕಪ್ಪು ಬಣ್ಣದ ಒಪ್ಪೋ ಕಂಪೆನಿಯ ಮೊಬೈಲನ್ನು ಮುದ್ದೆಮಾಲು-4 ಎಂದು ಗುರುತಿಸಲಾಯಿತು. ಆರನೇ ಆರೋಪಿಯ ಪಾಸ್ ಪೋರ್ಟ್ ಅನ್ನು ನಿಪಿ-29 ಎಂದು ಗುರುತಿಸಲಾಯಿತು. ಮೋಟಾರ್ ಸೈಕಲ್ ನ ಭಾವ ಚಿತ್ರವನ್ನು ನೋಡುತ್ತಿದ್ದು ಅದರಲ್ಲಿ ನನ್ನ ಇರುವಿಕೆ ಇದ್ದು ಸದ್ರಿ ಮೋಟಾರ್ ಸೈಕಲ್ ನಂ. ಕೆಎ-20-ಎಲ್-520 ರ ಭಾವ ಚಿತ್ರವನ್ನು ನಿಪಿ-30 ಎಂದು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.

6. ನಂತರ ಆರನೇ ಆರೋಪಿಯು ಘಟನೆ ನಡೆದ ಸ್ಥಳವನ್ನು ತೋರಿಸುವುದಾಗಿ ನನ್ನ ಮತ್ತು ಪೋಲಿಸರ ಮುಂದೆ ತಿಳಿಸಿದ್ದು, ತೆಂಕನಿಡಿಯೂರಿನ ಲಕ್ಷ್ಮೀನಗರದ ಮೂರನೇ ಕ್ರಾಸ್ ಬಳಿಗೆ ನಮ್ಮನ್ನು ಜೀಪಿನಲ್ಲಿ ಕರೆದುಕೊಂಡು ಹೋಗಿದ್ದು ಮೊದಲಿಗೆ ತಕ್ಷೀರು ನಡೆದ ಸ್ಥಳವನ್ನು ತೋರಿಸಿದ್ದು,

ನಂತರ ಅಲ್ಲೇ ಸಮೀಪದಲ್ಲಿ ಮೃತ ಯೋಗೀಶನು ಗಾಯಗೊಂಡು ಬಿದ್ದಿದ್ದ ಸ್ಥಳವನ್ನು ತೋರಿಸಿ ಕೊಟ್ಟಿದ್ದು, ಪೋಲಿಸರು ಪೋಟೋ ತೆಗೆದುಕೊಂಡಿರುತ್ತಾರೆ. ಪೋಲಿಸರು ಅದೇ ಸಮಯ ಮಹಜರು ತಯಾರಿಸಿರುತ್ತಾರೆ. ಸದ್ರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-31 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ಅದೇ ಸಮಯ ಪೋಲಿಸರು ಪೋಟೋ ತೆಗೆದಿರುತ್ತಾರೆ. ಎರಡು ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಡಿಸಿ ನಿಪಿ-32 ಮತ್ತು 33 ಎಂದು ಗುರುತಿಸಲಾಯಿತು.

7. ಆರೋಪಿತರು ಕೃತ್ಯದ ಪೂರ್ವದಲ್ಲಿ ವ್ಯಾಗ್ನರ್ ಕಾರಿನಲ್ಲಿ ಬಂದು ಕಾರನ್ನು ನಿಲ್ಲಿಸಿದ್ದ ಸ್ಥಳವನ್ನು ಆರನೇ ಆರೋಪಿ ಗಿರೀಶ್ ತೋರಿಸಿಕೊಟ್ಟಿದ್ದು, ಸದ್ರಿ ಸ್ಥಳವನ್ನು ಪೋಲಿಸರು ಪರಿಶೀಲಿಸಿರುತ್ತಾರೆ. ಅಲ್ಲಿಂದ ಸ್ವಲ್ಪ ದೂರದಲ್ಲಿ ನಾಲ್ಕನೇ ಆರೋಪಿಯು ತೊಟ್ಟಿದ್ದ ಬಟ್ಟೆಯನ್ನು ಬಿಸಾಡಿದ ಸ್ಥಳ ಹಾಗೂ ಚಾಕುವನ್ನು ಬಿಸಾಡಿದ ಸ್ಥಳವನ್ನು ಆರನೇ ಆರೋಪಿಯು ತೋರಿಸಿರುತ್ತಾನೆ. ಅದೇ ಸಮಯ ಪೋಲಿಸರು ಮಹಜರನ್ನು ತಯಾರಿಸಿರುತ್ತಾರೆ. ಸದ್ರಿ ಮಹಜರನ್ನು ನೋಡುತ್ತಿದ್ದು ನಿಪಿ-34 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು. ಅದೇ ಸಮಯ ಪೋಲಿಸರು ಪೋಟೋ ತೆಗೆದಿರುತ್ತಾರೆ. ಎರಡು ಪೋಟೋ ಗಳನ್ನು ನೋಡುತ್ತಿದ್ದು ಅವುಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಡಿಸಿ ನಿಪಿ-35 ಮತ್ತು 36 ಎಂದು ಗುರುತಿಸಲಾಯಿತು. ನಂತರ ಆರನೇ ಆರೋಪಿಯು ನಮ್ಮನ್ನು ಹಾಗೂ ಪೋಲಿಸರನ್ನು ಶ್ರೀ ಸಾಯಿ ಮಂದಿರದ ಬಳಿ ಇರುವ ಇಂದ್ರಾಣಿ ಹೊಳೆಯ ಬದಿ ಕರೆದುಕೊಂಡು ಹೋಗಿ ಕೃತ್ಯದ ಸಮಯ ಧರಿಸಿದ್ದ ಉಳಿದ ಆರೋಪಿತರ ಬಟ್ಟೆಯನ್ನು ನದಿಗೆ ಬೀಸಾಡಿದ ಸ್ಥಳವನ್ನು ತೋರಿಸಿಕೊಟ್ಟಿರುತ್ತಾರೆ. ಅದೇ ಸ್ಥಳದಲ್ಲಿ ಪೋಲೀಸರು ಮಹಜರು ಬರೆದಿರುತ್ತಾರೆ. ಆ ಮಹಜರನ್ನು ಈಗ ನೋಡುತ್ತಿದ್ದು ನಿಪಿ-37 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-37(ಎ) ಎಂದು ಗುರುತಿಸಲಾಯಿತು. ಅದೇ ಸಮಯ ಪೋಲಿಸರು ಪೋಟೋ ತೆಗೆದಿರುತ್ತಾರೆ. ಒಂದು ಪೋಟೋವನ್ನು ನೋಡುತ್ತಿದ್ದು ಅದನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಡಿಸಿ ನಿಪಿ-38 ಎಂದು ಗುರುತಿಸಲಾಯಿತು.

8. ಕೃತ್ಯದ ಸಮಯ ನೋಡಿರುವ ಆರೋಪಿತರು ಈಗ ನ್ಯಾಯಾಲಯದ ಮುಂದೆ ಇದ್ದು 1 ಮತ್ತು 2 ನೇ ಆರೋಪಿತರನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡಿ ಗುರುತಿಸಿರುತ್ತೇನೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ.

**1 ರಿಂದ 3 ನೇ ಆರೋಪಿತರ ಪರ ಪಾಟಿ ಸವಾಲುಃ ಶ್ರೀ ಎಂ.ಎಸ್.ಎಸ್. ವಕೀಲರಿಂದ**

1. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 3 ರಿಂದ 4 ಬಾರಿ ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಘಟನೆ ನಡೆದ ದಿನದ ಮರುದಿನ ಬೆಳಿಗ್ಗಿನ ಜಾವ 4-00 ಗಂಟೆಗೆ ಪೋಲಿಸ್ ಠಾಣೆಗೆ ಪ್ರಥಮ ಬಾರಿಗೆ ಹೋಗಿರುತ್ತೇನೆ. ಪೋಲಿಸ್ ಠಾಣೆಯಲ್ಲಿ ಎಷ್ಟು ದಾಖಲಾತಿಗಳನ್ನು ತಯಾರಿಸಿದ್ದಾರೆ ಎಂದು ಗೊತ್ತಿಲ್ಲ. ಸುಮಾರು ಅರ್ಧ ಗಂಟೆ ಪೋಲಿಸ್ ಠಾಣೆಯಲ್ಲಿ ಇದ್ದೆ. ಅಲ್ಲಿಂದ ಘಟನೆ ನಡೆದ ಸ್ಥಳಕ್ಕೆ ಹೋಗಿರುತ್ತೇವೆ. ಆಗ ಬೆಳಗ್ಗಿನ ಜಾವ 4-30 ಆಗಿರಬಹುದು. ಬೆಳಿಗ್ಗೆ 6-30 ರವರೆಗೆ ಘಟನಾ ಸ್ಥಳದಲ್ಲಿ ಇದ್ದೆ. ಅಲ್ಲಿ ಪೋಲಿಸರು ಮಹಜರನ್ನು ತಯಾರಿಸಿದ್ದು ಪೋಲಿಸರ ಹೇಳಿಕೆಯಂತೆ ತಯಾರಿಸಿರುತ್ತಾರೆ. ಒಟ್ಟು ಎಷ್ಟು ಪುಟಗಳ ಮಹಜರು ಬರೆದಿದ್ದಾರೆ ಎಂದು ಗೊತ್ತಿಲ್ಲ. ಆಗ ತುಂಬಾ ಜನ ಸೇರಿದ್ದಾರೆ. ನನ್ನ ಎಷ್ಟು ಸಹಿಗಳನ್ನು ಪಡೆದುಕೊಂಡಿದ್ದಾರೆ ಎಂದು ಗೊತ್ತಿಲ್ಲ. ಅದರಲ್ಲಿ ಏನೆಲ್ಲಾ ಬರೆದಿದ್ದಾರೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ.

2. ನನಗೆ ನಂದಿನಿ ಹಾಲು ಮಾರಾಟ ಮಾಡುವ ಬೂತ್ ಇದೆ. ನನ್ನ ಹಾಲಿನ ಬೂತ್ ನಿಂದ ಲಕ್ಷ್ಮೀನಗರಕ್ಕೆ ಒಂದೂವರೆ ಕಿ.ಮೀ. ದೂರ ಇದೆ. ಬೆಳಿಗ್ಗೆ 6-00 ಗಂಟೆಗೆ ನನ್ನ ಅಂಗಡಿಗೆ ಹಾಲು ಸಪ್ಲೈ ಮಾಡುತ್ತಾರೆ. ರಾತ್ರಿ 10-30 ರವರೆಗೆ ಸದ್ರಿ ಹಾಲಿನ ಬೂತ್ ತೆರೆದಿರುತ್ತದೆ. ಅಂಗಡಿಯನ್ನು ಮುಚ್ಚಿ ಮನೆಗೆ ತೆರಳುವಾಗ ರಾತ್ರಿ 11-00 ಗಂಟೆ ಆಗುತ್ತದೆ. ಲಕ್ಷ್ಮೀನಗರ ಎಂಬುವುದು 10 ಕ್ರಾಸ್‌ಗಳು ಇರುವ ದೊಡ್ಡ ಬಡಾವಣೆ. ಒಂದು ಕ್ರಾಸ್ ನಿಂದ ಇನ್ನೊಂದು ಕ್ರಾಸ್‌ಗೆ 100 ರಿಂದ 200 ಮೀಟರ್ ಅಂತರ ಇರಬಹುದು. ನನ್ನ ಮನೆ 1 ನೇ ಕ್ರಾಸ್‌ನಲ್ಲಿ ಇದೆ. ಲಕ್ಷ್ಮೀನಗರ ಬಡಾವಣೆಯಲ್ಲಿ ಸುಮಾರು 500 ವಾಸದ ಮನೆಗಳು ಇರಬಹುದು. ಕ್ರಾಸ್ ರಸ್ತೆಯಲ್ಲಿ ಒಂದು ಲಾರಿ ಮತ್ತು ಕಾರು ಎದುರು ಬದುರಾಗಿ ಚಲಿಸಬಹುದು. ಯೋಗೀಶನ ಮನೆ ಮೂರನೇ ಕ್ರಾಸ್ ನಲ್ಲಿ ಇದೆ. ನನ್ನ ಮನೆಯಿಂದ ಯೋಗೀಶನ ಮನೆಯ ಮಧ್ಯೆ ಸುಮಾರು 3 ಮನೆಗಳು ಇವೆ. ರಸ್ತೆಯ ಮೂಲಕವೇ ಹೋದರೆ 15 ರಿಂದ 20 ಮನೆಗಳನ್ನು ದಾಟಿ ಹೋಗಬೇಕು. ಮೂರು ನಾಲ್ಕು ಮನೆಯನ್ನು ದಾಟಿ ಯೋಗೀಶನ ಮನೆಗೆ ತಲುಪಿದ್ದೆ. ಯೋಗೀಶನನ್ನು ಚಿಕ್ಕಂದಿನಿಂದ

ನೋಡುತ್ತಿದ್ದು ಆತ ನನಗೆ ಸ್ನೇಹಿತನಾಗಿರುತ್ತಾನೆ. ನಾನು ಮತ್ತು ಯೋಗೀಶ ಕೆಲವು ಸಮಾರಂಭಗಳಲ್ಲಿ ಮದ್ಯಪಾನ ಮಾಡುತ್ತೇವೆ. ಯೋಗೀಶ ಮೃತ ಪಟ್ಟ ದಿನ ಬೆಳಿಗ್ಗೆ ಸಹಾ ಆತನನ್ನು ನೋಡಿದ್ದೆ. ಘಟನೆ ದಿನ ರಾತ್ರಿ ನಾನು ಮನೆಗೆ ಬಂದು ಊಟ ಮಾಡಿ ಆಗುವಾಗ ರಾತ್ರಿ 11-30 ಆಗಿರಬಹುದು. ಘಟನಾ ಸ್ಥಳದಲ್ಲಿ ಸುಮಾರು 50 ಜನ ಸೇರಿರಬಹುದು. ನಾನು ಘಟನಾ ಸ್ಥಳಕ್ಕೆ ಹೋದಾಗ ಅಸಾ1 ರಿಂದ 3 ರವರು ಸಹಾ ಇದ್ದರು. ಘಟನೆಯ ಬಗ್ಗೆ ಅವರೊಂದಿಗೆ ಮಾತನಾಡಿದ್ದೇನೆ. ಯೋಗೀಶ ನಾನು ನೋಡುವಾಗ ಬಿದ್ದಿದ್ದ. ಆತನ ಮೈಮೇಲೆ ಶರ್ಟ್ ಇತ್ತು. ಆತನ ಗಾಯಗಳಿಗೆ ಬೈರಾಸಿನಿಂದ ಕಟ್ಟುತ್ತಿದ್ದರು. ಯಾಕೆ ಬೈರಾಸು ಕಟ್ಟುತ್ತಿದ್ದೀರಿ ಏನಾಗಿದೆ ಎಂದು ನಾನು ಕೇಳಲಿಲ್ಲ. ಯೋಗೀಶನಿಗೆ ಬೈರಾಸು ಕಟ್ಟುತ್ತಿದ್ದಾಗ ಚಾಸಾ7 ರವರು ಸಹಾ ಇದ್ದರು. ಚಾಸಾ7 ರವರು ಸಹಾ ಯೋಗೀಶನ ಸ್ನೇಹಿತ. ಪ್ರವೀಣ ಸ್ಥಳದಲ್ಲಿ ಇದ್ದ ಬಗ್ಗೆ ನನಗೆ ನೆನಪಿಲ್ಲ. ಆ್ಯಂಬುಲೆನ್ಸ್ ಅನ್ನು ತರಿಸಲು ಫೋನ್ ಮಾಡಿದ್ದಾರೆ ಎಂದು ತಿಳಿಯಿತು. ನಾನು ಹೋದ 5, 10 ನಿಮಿಷದಲ್ಲಿ ಆ್ಯಂಬುಲೆನ್ಸ್ ಬಂದಿರುತ್ತದೆ. ಗರಡಿಮಜಲಿನಿಂದ ಆ ಆ್ಯಂಬುಲೆನ್ಸ್ ಬಂದಿರುತ್ತದೆ. ಘಟನೆಯನ್ನು ಪೋಲಿಸರಿಗೆ ಯಾರು ಫೋನ್ ಮೂಲಕ ತಿಳಿಸಿದ್ದಾರೆ ಎಂದು ಗೊತ್ತಿಲ್ಲ. ನಾನು ಹೋದಾಗ ಘಟನೆಯನ್ನು ಪೋಲಿಸರಿಗೆ ತಿಳಿಸಿ ಆಗಿತ್ತು. ಪೋಲಿಸರು ಮಣಿಪಾಲ ಆಸ್ಪತ್ರೆಗೆ ಬಂದಿರುತ್ತಾರೆ. ಮೃತನ ಮೈತುಂಬಾ ಗಾಯಗಳಾಗಿದ್ದು ಎಷ್ಟು ಗಾಯಗಳಾಗಿದ್ದವು ಎಂದು ಗೊತ್ತಿಲ್ಲ. ಘಟನೆ ಬಗ್ಗೆ ಪೋಲಿಸರಿಗೆ ನಾನು ಮಣಿಪಾಲ ಆಸ್ಪತ್ರೆಯಲ್ಲಿ ತಿಳಿಸಿರುತ್ತೇನೆ. ಮದ್ಯ ಕುಡಿಯುವ ವಿಚಾರದಲ್ಲಿ ದ್ವೇಷ ಇದ್ದ ಬಗ್ಗೆ ಒಂದನೇ ಆರೋಪಿಯ ವಿರುದ್ಧ ಪ್ರಕರಣ ದಾಖಲಾಗಿದ್ದು ಆತನಿಗೆ ದಂಡ ವಿಧಿಸಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳನ್ನು ಪ್ರಥಮ ಬಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯೋಗೀಶನಿಗೆ ಬೈರಾಸಿನಿಂದ ಕಟ್ಟುತ್ತಿದ್ದಾಗ ಆತ ಉಸಿರಾಡುತ್ತಿದ್ದ ಮತ್ತು ಮಾತನಾಡುತ್ತಿದ್ದ.

3. ಎರಡನೇ ಆರೋಪಿ ರೋಹಿತ್ ಹಾಗೂ ಮೂರನೇ ಆರೋಪಿ ಸುಜಿತ್ ಯೋಗೀಶನ ಹೊಟ್ಟೆಯ ಭಾಗಕ್ಕೆ ಚುಚ್ಚುತ್ತಿದ್ದರು ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಯೋಗೀಶನು ಮನೆಯಿಂದ ಸುಮಾರು 25 ಅಡಿ ದೂರದಲ್ಲಿ ಬಿದ್ದಿದ್ದ. ಯೋಗೀಶನ ಮನೆಯಿಂದ ಆತ ಬಿದ್ದಿದ್ದ ಸ್ಥಳದ ಮಧ್ಯ ಒಂದು ಮನೆ ಇದೆ. ಯೋಗೀಶ ಬಿದ್ದಿದ್ದ ಸ್ಥಳ ನಾಲ್ಕು ದಾರಿ ಸೇರುವ ಸ್ಥಳ ಆಗಿರುತ್ತದೆ. ಅಸಾ1 ರವರು ಪೋಲಿಸರಿಗೆ ದೂರು ನೀಡುವ ಮುಂಚೆ ನನ್ನೊಂದಿಗೆ ಮಾತುಕತೆ ನಡೆಸಿಲ್ಲ. ರೋಹಿತನ ಕೈಯಲ್ಲಿದ್ದ ಚೂರಿಯನ್ನು ತೆಗೆದುಕೊಂಡು ವಿನಯ್ ದೇವಾಡಿಗ ಯೋಗೀಶನಿಗೆ

ತಿವಿದಿದ್ದಾನೆ ಎಂದು ಪೋಲಿಸರಗೆ ಹೇಳಿದ್ದೇನೆ. ನಾನು ಹಾಗೂ ಒಂದನೇ ಆರೋಪಿ ಘಟನೆಗಿಂತ ಹಿಂದೆ ಜಗಳ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ.

4. ಈ ಹಿಂದೆ ಬೈಲಕರೆ ಶೀನ ಎಂಬವನು ನನಗೆ ಹಲ್ಲೆ ಮಾಡಿ ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಬೈಲಕೆರೆ ಶೀನ ಎಂಬಾತ ರೌಡಿ ಶೀಟರ್ ಆಗಿದ್ದ. ಆತನು ಕೊಲೆಯಾಗಿದ್ದು ಆ ಪ್ರಕರಣದ ಆರೋಪಿತರು ನನ್ನ ಸ್ನೇಹಿತರಾಗಿದ್ದರು. ನನಗೆ ಹಲ್ಲೆಯಾದ ಪ್ರಕರಣಕ್ಕೆ ಪ್ರತಿಯಾಗಿ ನನ್ನ ಮೇಲೆಯೂ ಸಹಾ ಪ್ರಕರಣ ದಾಖಲಾಗಿತ್ತು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳುವ ರೀತಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ. ಮಹಜರಿಗೆ ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲು-3 ಹಾಗೂ ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯೋಗೀಶನ ಕೊಲೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>4 ನೇ ಆರೋಪಿ ಪರ ಪಾಟಿ ಸವಾಲುಃ ಶ್ರೀ ಎಚ್. ಎಚ್.ಕೆ. ವಕೀಲರಿಂದಃ</u>**

ನಾನು ಕೃತ್ಯ ಸ್ಥಳದಲ್ಲಿ ಇದ್ದುದರಿಂದ ಪೋಲಿಸರು ನನ್ನನ್ನು ಮಹಜರಿಗೆ ಸಾಕ್ಷಿಯಾಗಿ ಕರೆಸಿದ್ದಾರೆ. ನನಗೆ ಪೋಲಿಸರ ಪರಿಚಯ ಇತ್ತು. ಆ ಕಾರಣಕ್ಕಾಗಿ ನನ್ನನ್ನು ಠಾಣೆಗೆ ಕರೆಸಿದ್ದಾರೆ ಎಂದರೆ ಸರಿಯಲ್ಲ. ಘಟನೆಯಾದ ಬಗ್ಗೆ ಪಿಯರ್ಾದುದಾರರ ಜೊತೆ ಬೆಳಗ್ಗಿನ ಜಾವ ನಾನು ಹಾಗೂ ಸುಮಾರು 20 ಜನ ಠಾಣೆಗೆ ಹೋಗಿದ್ದೆವು. ಪೋಲಿಸರು ನನಗೆ ನೋಟೀಸ್ ನೀಡಿ ಬರುವಂತೆ ಕರೆಸಿಲ್ಲ. ಠಾಣೆಗೆ ಹೋದ ನಾವು 20 ಜನ ಘಟನಾ ಸ್ಥಳಕ್ಕೆ ಮರಳಿ ಬಂದಿದ್ದೆವು. ಹಾಗೆ ಬಂದಾಗ ಘಟನಾ ಸ್ಥಳದಲ್ಲಿ ಸುಮಾರು 50 ಜನ ಸೇರಿದ್ದರು. ಬೆಳಗ್ಗಿನ ಜಾವ 4-30 ರ ಸಮಯದಲ್ಲಿ ನಾವು ಘಟನಾ ಸ್ಥಳಕ್ಕೆ ಬಂದಾಗ ಪೋಲಿಸರು ಇದ್ದರು. ನಾವು ಬರುವ ಮುಂಚೆಯೇ ಪೋಲಿಸರು ಬರವಣಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಪಂಚನಾಗಿ ಬರುವಂತೆ ಪೋಲಿಸರು ಲಿಖಿತ ನೋಟೀಸ್ ನೀಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಸಹಿ ಹಾಕಿದ್ದೇನೆ ಎಂದರೆ ಸಾಕ್ಷಿಯು ರಂಜನ್‌ರವರ ಕೋರಿಕೆ ಮೇರೆಗೆ ಸಹಿ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಅದೇ ದಿನ ಬೆಳಿಗ್ಗೆ 10-00 ಗಂಟೆಗೆ ಪುನಃ ಪೋಲಿಸ್ ಠಾಣೆಗೆ ಹೋಗಿದ್ದೇನೆ. ಆಗ ಪೋಲಿಸರು ಮೂರು ದಾಖಲೆಗಳನ್ನು ಮಾಡಿಕೊಂಡಿದ್ದಾರೆ. ಅವುಗಳಲ್ಲಿ ನನ್ನ ಜೊತೆ ಅನಿಶ್

ಸಹ ಸಹಿ ಮಾಡಿದ್ದಾರೆ. ಆ ದಾಖಲೆಗಳನ್ನು ನಾನು ಓದಿ ನೋಡಿಲ್ಲ. ಅವು ಎಷ್ಟು ಪುಟಗಳ ದಾಖಲೆ ಎಂದು ಗೊತ್ತಿಲ್ಲ. ನಾನಲ್ಲದೆ ಅವುಗಳಲ್ಲಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನೋಡಿಲ್ಲ. ರಾತ್ರಿ ಹೊತ್ತು ಘಟನಾ ಸ್ಥಳ ಕತ್ತಲೆ ಇರುವ ಸ್ಥಳ ಎಂದರೆ ಸಾಕ್ಷಿಯು ಅಲ್ಲಿ ವಿದ್ಯುತ್ ಬೆಳಕು ಇದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದಲ್ಲಿ ಯಾವುದೇ ವಿದ್ಯುತ್ ಬೆಳಕು ವ್ಯವಸ್ಥೆ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿತರನ್ನು ಘಟನಾ ಸ್ಥಳದಲ್ಲಿ ನೋಡಿಯೇ ಇಲ್ಲ ಮತ್ತು ಆರೋಪಿತರು ಯೋಗೀಶನಿಗೆ ಹಲ್ಲೆ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ನಾಲ್ಕನೇ ಆರೋಪಿಯ ಪೂರ್ವಾ ಪರದ ಬಗ್ಗೆ ಮತ್ತು ಅವರ ತಂದೆ ತಾಯಿ ಮತ್ತು ಅವರು ಎಲ್ಲಿ ವಾಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಮೊದಲ ಬಾರಿಗೆ ನಾಲ್ಕನೇ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಬೈಲಕೆರೆ ಶೀನನ ಗುಂಪಿನ ವಿರುದ್ಧ ಇರುವ ಗುಂಪಿನಲ್ಲಿ ನಾನು ಸದಸ್ಯನಾಗಿದ್ದೆ ಎಂದರೆ ಸರಿಯಲ್ಲ. ಬೈಲಕೆರೆ ಶೀನನ ವಿರುದ್ಧ ಇರುವ ಗುಂಪಿಗೆ ನಾನು ಸಹಾಯ ಮಾಡುತ್ತಿದ್ದೆ ಎಂದರೆ ಸರಿ. ಬೈಲಕೆರೆ ಶೀನನ ವಿರುದ್ಧ ಗುಂಪು ಹಾಗೂ ನಾಲ್ಕನೇ ಆರೋಪಿಗೆ ಹಿಂದಿನಿಂದಲೇ ದ್ವೇಷ ಇತ್ತು ಎಂದರೆ ಸರಿಯಲ್ಲ. ನಾಲ್ಕನೇ ಆರೋಪಿಯ ಮೇಲಿನ ದ್ವೇಷದಿಂದ ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ನಾಲ್ಕನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>5 ನೇ ಆರೋಪಿ ಪರ ಪಾಟಿ ಸವಾಲುಃ ಶ್ರೀ ಎ.ಬಿ.ಎಚ್ ವಕೀಲರಿಂದಃ</u>**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾಲ್ಕೈದು ಬಾರಿ ಪೋಲಿಸ್ ಠಾಣೆಗೆ ಹೋಗಿದ್ದೆ. ನಾಲ್ಕನೇ ಆರೋಪಿಯನ್ನು ಪೋಲಿಸ್ ಠಾಣೆಯಲ್ಲಿ ಹಾಗೂ ಮಹಜರು ಮಾಡಿದ ಸ್ಥಳದಲ್ಲಿ ಭೇಟಿಯಾಗಿ ರುತ್ತೇನೆ. ಪೋಲಿಸರು ನನ್ನ ಹೇಳಿಕೆ ತೆಗೆದುಕೊಂಡ ಬಗ್ಗೆ ನಾನು ಸಹಿ ಮಾಡಿದ್ದೇನೆ. ಐದನೇ ಆರೋಪಿಯನ್ನು ದಸ್ತಗಿರಿ ಮಾಡಿರುವ ವಿಚಾರ ಪೋಲಿಸರು ತಿಳಿಸಿರುತ್ತಾರೆ. ಐದನೇ ಆರೋಪಿ ಈ ಪ್ರಕರಣದಲ್ಲಿ ಬಾಗಿಯಾಗಿದ್ದಾನೆ ಎಂದು ಪೋಲಿಸರು ತಿಳಿಸಿರುತ್ತಾರೆ ಮತ್ತು ನಾನು ಸ್ಥಳದಲ್ಲಿ ಇದ್ದೆನು. ನಿಪಿ-34 ಮತ್ತು 35 ಮಹಜರಿನಲ್ಲಿ ಟೈಪಿಂಗ್ ಅನ್ನು ಠಾಣೆಯಲ್ಲಿ ಮಾಡಿರುತ್ತಾರೆ. ನಿಪಿ-34 ಮತ್ತು 35 ಕ್ಕೆ ಇನ್ನೊಬ್ಬ ಸುಧಾಕರ ಸಹಿ ಮಾಡಿರುತ್ತಾರೆ. ಯಾವುದೇ ಆರೋಪಿತರನ್ನು ಪೋಲಿಸರು ನನ್ನ ಸಮಕ್ಷಮ ವಿಚಾರಣೆ ಮಾಡಿಲ್ಲ. ಐದನೇ ಆರೋಪಿಯನ್ನು ನನ್ನ ಸಮಕ್ಷಮ

ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ದಿಃ 12-07-2020 ರಂದು ಮಧ್ಯಾಹ್ನ 12-00 ಗಂಟೆಗೆ ಪೋಲಿಸ್ ಠಾಣೆಗೆ ಹೋಗಿದ್ದೆ. ಸುಮಾರು ಅರ್ಧ ಗಂಟೆ ಪೋಲಿಸ್ ಠಾಣೆಯಲ್ಲಿದ್ದೆ.

**<u>6 ನೇ ಆರೋಪಿ ಪರ ಪಾಟಿ ಸವಾಲುಃ ಶ್ರೀ ಸಿ.ವಿ.ಎಚ್. ವಕೀಲರಿಂದಃ</u>**

ದಿಃ 06-07-2020 ರಂದು ನಾನು ಸ್ಥಳಕ್ಕೆ ಹೋದಾಗ 50 ರಿಂದ 60 ಜನ ಸೇರಿದ್ದರು. ರಾತ್ರಿಯಾಗಿದ್ದ ಕಾರಣ ವಾಹನಗಳ ಸಂಚಾರ ಇರಲಿಲ್ಲ. ದೂರ ದೂರ ನಿಂತಿದ್ದ ಜನರನ್ನು ಸರಿಸಿ ನೋಡುವಾಗ ಮೃತ ಬಿದ್ದಿರುವುದನ್ನು ನೋಡಿರುತ್ತೇನೆ. ಪೋಲಿಸರು ಈ ಪ್ರಕರಣದಲ್ಲಿ ನನ್ನನ್ನು ವಿಚಾರಣೆ ಮಾಡಿದ್ದಾರೆ. ಪೋಲಿಸರಿಗೆ ನಾನು ಹೇಳಿಕೆ ಕೊಡುವಾಗ ಇಬ್ಬರ ಹೆಸರು ಅನುಪ್ ಹಾಗೂ ಗಿರೀಶ್ ಎಂದು ನಂತರ ತಿಳಿಯಿತು ಎಂದು ಹೇಳಿದ್ದೇನೆ. ಸ್ಥಳದಲ್ಲಿದ್ದ ಜನರು ಅವರಿಬ್ಬರ ಹೆಸರನ್ನು ತಿಳಿಸಿರುತ್ತಾರೆ. ಬೆಳಗ್ಗಿನ ಜಾವ 4-00 ಗಂಟೆಗೆ ತಿಳಿಯಿತು. ದಿಃ 07-07-2020 ರಂದು ಈ ವಿಚಾರವನ್ನು ಪೋಲಿಸರಿಗೆ ತಿಳಿಸಿದ್ದೇನೆ. ಈ ಇಬ್ಬರು ಅರೋಪಿತರನ್ನು ನಾನು ಸ್ವತಃ ನೋಡಿರುವುದಿಲ್ಲ. ಅವರ ಹೆಸರನ್ನು ನನಗೆ ಯಾರು ತಿಳಿಸಿದರು ಎಂದು ಹೇಳಲು ಬರುವುದಿಲ್ಲ. ಆರನೇ ಆರೋಪಿಯನ್ನು ಈ ಪ್ರಕರಣದಲ್ಲಿ ಪ್ರಥಮ ಬಾರಿಗೆ ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ಪೋಲಿಸರು ಈ ಪ್ರಕರಣದಲ್ಲಿ ನನ್ನನ್ನು ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗಿ ನಂತರ ಪೋಲಿಸ್ ಠಾಣೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಆ ದಾಖಲಾತಿಗಳಲ್ಲಿ ಏನು ಬರೆದುಕೊಂಡಿದ್ದಾರೆಂದು ಗೊತ್ತಿಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಓಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.